## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 425 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆಯಲ್ಲಿ 1920 ರಿಂದಲೂ ಸಾರ್ವಜನಿಕರಿಗೆ ಸರ್ಕಾರಿ ಜಮೀನುಗಳು ಮಂಜೂರು/ಹರಾಜು ಮೂಲಕ ಲಭ್ಯವಾಗಿದ್ದು ಸಾರ್ವಜನಿಕರ ಬಳಿ ದಾಖಲೆಗಳಿದ್ದರೂ ತಾಲೂಕು ಕಚೇರಿ ಸರ್ಕಾರಿ ಕಚೇರಿಗಳಲ್ಲಿ ಮೂಲ ದಾಖಲೆಗಳು ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರಿ ಜಮೀನುಗಳು ಈ ಹಿಂದೆ ಸಾರ್ವಜನಿಕರಿಗೆ ಮಂಜೂರಾಗಿರುವ ಪ್ರಕರಣಗಳಲ್ಲಿ ಮೂಲ ಮಂಜೂರಾತಿ ಕಡತಗಳು ಲಭ್ಯವಿದ್ದಲ್ಲಿ, ಅಂತಹ ಪ್ರಕರಣಗಳನ್ನು ಆದ್ಯತೆ ಮೇರೆ ತೆಗೆದುಕೊಂಡು ದರಖಾಸ್ತು ಪೋಡಿ ಆಂದೋಲನ ಮೂಲಕ ಕ್ರಮಕೈಗೊಳ್ಳಲಾಗುತ್ತಿದೆ.<br>ಮಂಜೂರಾತಿ ದಾಖಲೆಗಳು ಸಾರ್ವಜನಿಕರ ಬಳಿ ಲಭ್ಯವಿದ್ದು, ತಾಲ್ಲೂಕು ಕಚೇರಿಗಳಲ್ಲಿ ಲಭ್ಯವಿಲ್ಲದಂತಹ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ. |
| (ಆ) | ಸಾರ್ವಜನಿಕರು ವಂಶ ಪಾರಂಪಾರ್ಯವಾಗಿ ಅನುಭವದಲ್ಲಿದ್ದು, ಆರ್. ಆರ್ ಇಂಡೆಕ್ಸ್ ಕೈಬರಹ ಪಹಣಿ ಹಾಗೂ ಆರ್. ಟಿ. ಆರ್ ಗಳಲ್ಲಿ ಹೆಸರು ನಮೂದಾಗಿದ್ದರೂ, ಕಚೇರಿಗಳಲ್ಲಿ ಮೂಲಮಂಜೂರಾತಿ/ಹರಾಜು ಕಡತಗಳಿಲ್ಲವೆಂಬ ಕಾರಣಕ್ಕೆ ನೈಜತೆಯನ್ನು ಅನುಮಾನಿಸಿ, ಮಂಜೂರಾತಿ ರದ್ದುಪಡಿಸಲು ಶಿಫಾರಸು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕರು ವಂಶ ಪಾರಂಪಾರ್ಯವಾಗಿ ಅನುಭವದಲ್ಲಿದ್ದು, ಆರ್. ಆರ್ ಇಂಡೆಕ್ಸ್ ಕೈಬರಹ ಪಹಣಿ ಹಾಗೂ ಆರ್. ಟಿ. ಆರ್ ಗಳಲ್ಲಿ ಹೆಸರು ನಮೂದಾಗಿದ್ದರೂ, ಕಚೇರಿಗಳಲ್ಲಿ ಮೂಲಮಂಜೂರಾತಿ/ಹರಾಜು ಕಡತಗಳಿಲ್ಲವೆಂಬ ಕಾರಣಕ್ಕೆ ನೈಜತೆಯನ್ನು ಅನುಮಾನಿಸಿ, ಖಾತೆ ರದ್ದತಿಗೆ ಯಾವುದೇ ಕ್ರಮವಹಿಸಿರುವುದಿಲ್ಲ.<br>ಜಿಲ್ಲೆಯಲ್ಲಿ ತಹಸೀಲ್ದಾರ್ ರವರು ನಮೂನೆ 1 ರಿಂದ 5 ಸಲ್ಲಿಸುವ ಸಂಧರ್ಭದಲ್ಲಿ ಯಾವುದೇ ಒಂದು ಮಂಜೂರಾತಿ ದಾಖಲಾತಿಗಳು ಲಭ್ಯವಿಲ್ಲದಂತಹ 20706 ಪ್ರಕರಣಗಳನ್ನು ಆನ್ ಲೈನ್ ಮೂಲಕ ಉಪವಿಭಾಗಾಧಿಕಾರಿಗಳಿಗೆ ಷರಾ ನಮೂದಿಸಿ ರವಾನಿಸಿರುತ್ತಾರೆ. |
| (ಇ) | ಮಂಡ್ಯ ಜಿಲ್ಲೆಯಲ್ಲಿ ಮೂಲ ದಾಖಲೆಗಳ ಕೊರತೆಯಿಂದ ಈ ಪಹಣಿ ನಮೂದು ದುರಸ್ತಿ ಮಂಜೂರಾತಿ ರದ್ದತಿ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಾವಿರಾರು ಪ್ರಕರಣಗಳು ಬಾಕಿ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ; | ಜಿಲ್ಲೆಯಲ್ಲಿ ದರಖಾಸ್ತು ಪೋಡಿ ಆಂದೋಲನದ ಮೂಲಕ ದುರಸ್ತಿ ಪ್ರಕ್ರಿಯೆಯನ್ನು ಸಮರ್ಪಕವಾಗಿ ಮಾಡಲಾಗುತ್ತಿದ್ದು, ಸರ್ಕಾರದ ಆದೇಶದ ಸಂಖ್ಯೆ: ಕಂ.ಇ.156, ಎಸ್.ಎಸ್.ಎಂ.2024, ದಿನಾಂಕ: 25-11-2024 ರಲ್ಲಿನ ನಿರ್ದೇಶನಗಳಂತೆ ಸ್ವಯಂ ಪ್ರೇರಿತವಾಗಿ ದುರಸ್ತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ.<br><br>ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ 2453 ಪ್ರಕರಣಗಳಲ್ಲಿ ದುರಸ್ತಿ ಕಾರ್ಯ ನಡೆಸಿ 1214 ಪ್ರಕರಣಗಳಲ್ಲಿ ಆರ್.ಟಿ.ಸಿ ಇಂಡೀಕರಿಸಲಾಗಿರುತ್ತದೆ ಹಾಗೂ ಮಂಜೂರಾತಿ ದಾಖಲೆಗಳು ಲಭ್ಯವಿಲ್ಲದ ಪ್ರಕರಣಗಳು |

| | | |
|---|---|---|
| | | ಉಪವಿಭಾಗಾಧಿಕಾರಿ ಹಾಗೂ ತಹಸೀಲ್ದಾರ್ ರವರ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| (ಈ) | ಸುಮಾರು 50 ವರ್ಷಕ್ಕೂ ಹೆಚ್ಚು ಕಾಲದಿಂದ ಸಾಗುವಳಿಯಲಿದ್ದು, ಸರ್ಕಾರಿ ಕಚೇರಿಗಳ ಲೋಪದಿಂದ/ದಾಖಲೆಗಳ ಅಭಾವದಿಂದ ಮಂಜೂರಾತಿ ರದ್ದತಿಯ ಭೀತಿಯಲ್ಲಿರುವ ಸಾವಿರಾರು ರೈತರು ಮತ್ತು ಸಾರ್ವಜನಿಕರ ಹಿತರಕ್ಷಣೆಗೆ ಸರ್ಕಾರ ಕೈಗೊಂಡಿರುವ ಸೂಕ್ತ ಕ್ರಮಗಳೇನು? | ಸರ್ಕಾರಿ ಜಮೀನು ಮಂಜೂರಾಗಿ ಈವರೆಗೂ ದುರಸ್ತಿಯಾಗದೇ ಇರುವ ಪ್ರಕರಣಗಳನ್ನು ಸರ್ಕಾರದ ಆದೇಶದ ಸಂಖ್ಯೆ: ಕಂ.ಇ. 156 ಎಸ್.ಎಸ್.ಎಂ.2024, ದಿನಾಂಕ. 25-11-2024 ರಲ್ಲಿನ ನಿರ್ದೇಶನಗಳಂತೆ ಸ್ವಯಂ ಪ್ರೇರಿತವಾಗಿ ದುರಸ್ತಿ ಮಾಡಿಕೊಡಲಾಗುತ್ತಿದೆ.<br><br>ಆದರೆ ಯಾವುದೇ ಒಂದು ಮಂಜೂರಾತಿ ದಾಖಲೆ ಇಲ್ಲದ ಪ್ರಕರಣಗಳಲ್ಲಿ ದುರಸ್ತಿಗೆ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ. ಹಾಗೂ ಇಂತಹ ರೈತರನ್ನು ಒಕ್ಕಲೆಬ್ಬಿಸುವ ಹಾಗೂ ಖಾತೆ ರದ್ದುಪಡಿಸಲು ಯಾವುದೇ ಕ್ರಮವಹಿಸಿರುವುದಿಲ್ಲ. |

**(ಕಡತ ಸಂಖ್ಯೆ: ಆರ್‌ಡಿ 49 ಎಲ್‌ಜಿವ್ಯೆ 2026)**

**(ಡಾ:ಜಿ. ಪರಮೇಶ್ವರ)**
**ಉಪ ಮುಖ್ಯಮಂತ್ರಿ**